ಕವಿತೆ



# ಗಝಲ್

ಎಂತಹ ಗುರುತುಗಳನು ಬಿಟ್ಟು ಹೋಗುತಿರುವೆ
ಅತೃಪ್ತ ಪಾತ್ರಗಳನು ಕೊಟ್ಟು ಹೋಗುತಿರುವೆ

ಸತ್ತೂ ಇದ್ದ ಹಾಗೆ ನಟಿಸುತಿರುವೆಯಲ್ಲ ಏಕೆ
ಜೀವಂತ ಹೆಣವನು ಸುಟ್ಟು ಹೋಗುತಿರುವೆ

ಎಷ್ಟು ದಿನಗಳಾಗಿರಬಹುದು ಕನ್ನಡಿಯನು ನೋಡಿ
ಯಾವ ಪ್ರತಿಬಿಂಬಗಳನು ತೊಟ್ಟು ಹೋಗುತಿರುವೆ

ಆ ಅರಳದ ಮುಖದಲಿ ಆ ಮಂದಹಾಸವೆಲ್ಲಿ
ಬಾಚದ ತಲೆಗೆ ಹೂವನು ಇಟ್ಟು ಹೋಗುತಿರುವೆ

ನಿನ್ನೊಳಗೆ ನೀನೇ ಇಲ್ಲದಿರುವಾಗ 'ಉಮರ್'
ಸುಟ್ಟಮಣ್ಣಲ್ಲೇಕೆ ಸಸಿಯನು ನೆಟ್ಟು ಹೋಗುತಿರುವೆ



**ಉಮರ್ ದೇವರಮನಿ**

ಕಲೆ: ಡಿ.ಕೆ. ರಮೇಶ್

